| | |
|---|---|
| ಪಿ ಡಬ್ಲ್ಯೂಃ | 5 |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 02-04-2026 ರಂದು ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

1 ನೇ ಆರೋಪಿ ಮತ್ತು ದೂರುದಾರರ ನಡುವೆ ಇರುವ ಸಿವಿಲ್ ವ್ಯಾಜ್ಯದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆ ದಿನ ನೀವು ಪಿರ್ಯಾದುದಾರರ ಜಮೀನಿನ ಹತ್ತಿರ ಕೆಲಸಕ್ಕೆಂದು ಹೋಗಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಆ ರೀತಿ ನೀವು ಕೆಲಸಕ್ಕೆ ಹೋಗಿರುತ್ತಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ದಿಃ 16-07-2000 ಎಂದು ನುಡಿಯುತ್ತಾರೆ.

ನಿಮ್ಮನ್ನು ಯಾರು ಕೆಲಸಕ್ಕೆ ಕರೆದಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ದೂರುದಾರರು ಕರೆದಿರುತ್ತಾರೆ ಎಂದು ನುಡಿಯುತ್ತಾರೆ. ದೂರುದಾರರ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿರುವುದಿಲ್ಲ. ನೀವು ಎಷ್ಟು ಜನ ಕೆಲಸಕ್ಕೆ ಹೋಗಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಐದು ಜನ ಎಂದು ನುಡಿಯುತ್ತಾರೆ. ಯಾರು ಯಾರು ಕೆಲಸಕ್ಕೆ ಹೋಗಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಧೀರ್ , ಭಾಸ್ಕರ , ರಾಮಚಂದ್ರ ಹರಿಜನ, ದೇವಂದ್ರ ಹಾಗೂ ಅವರ ತಮ್ಮ ಎಂದು ನುಡಿಯುತ್ತಾರೆ. ಸುಧೀರ್ ಹಾಗೂ ಭಾಸ್ಕರ ರವರು ಕೊಂಡ್ಲಿ ಗ್ರಾಮದವರಾಗಿರುತ್ತಾರೆ. ಬಿಳಗಿ ಗ್ರಾಮದಿಂದ ಕೊಂಡ್ಲಿ ಗ್ರಾಮಕ್ಕೆ ಸುಮಾರು 16 ಕಿ. ಮೀ ಅಂತರ ಇರುತ್ತದೆ. ಸುಧೀರ್ ಹಾಗೂ ಭಾಸ್ಕರ ರವರು ಕೂಲಿ ಕೆಲಸ ಮಾಡುವವರಾಗಿದ್ದು ಆದ ಕಾರಣ ಅವರುಗಳನ್ನು ಕೆಲಸಕ್ಕೆಂದು ಕರೆದುಕೊಂಡು ಬಂದಿರುತ್ತಾರೆ.

ಆ ದಿನ ಸುಧೀರ್ ಹಾಗೂ ಭಾಸ್ಕರ ರವರುಗಳು ಎಷ್ಟು ಗಂಟೆಗೆ ಕೆಲಸಕ್ಕೆ ಬಂದಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಬೆಳಿಗ್ಗೆ 10-00 ಬಂದಿದ್ದರು ಎಂದು ನುಡಿಯುತ್ತಾರೆ. ನೀವು ಎಷ್ಟು ಗಂಟೆಗೆ ಅಲ್ಲಿಗೆ ಹೋಗಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು 10-00 ಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಗದ್ದೆಯನ್ನು ಕೊಚ್ಚುವ ಕೆಲಸಕ್ಕೆ ಹೋಗಿರುತ್ತೇನೆ. ನೀವು ಅಲ್ಲಿಗೆ ಯಾವ ಯಾವ ಸಲಕರಣೆಗಳನ್ನು ತೆಗೆದುಕೊಂಡು ಹೋಗಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಗುದ್ದಲಿಯನ್ನುತೆಗೆದುಕೊಂಡು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಎಷ್ಟು ಜನರ ಕೈಯಲ್ಲಿ ಗುದ್ದಲಿ ಇತ್ತು ಎನ್ನುವ ಪ್ರಶ್ನೆಗೆ ಸಾಕ್ಷಿ ಎಲ್ಲರ ಕೈಯಲ್ಲಿ ಗುದ್ದಲಿ ಇತ್ತು ಎಂದು ನುಡಿಯುತ್ತಾರೆ.

ಗಲಾಟೆ ಎಷ್ಟು ಗಂಟೆಗೆ ಆಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಬೆಳಿಗ್ಗೆ 10-30 ಗೆ ಆಗಿತ್ತು ಎಂದು ನುಡಿಯುತ್ತಾರೆ. ಗಲಾಟೆ ಆಗಿರುತ್ತದೆ ಎಂದು ಹೇಳುತ್ತಿರುವ ಸ್ಥಳ ದೇವೆಂದ್ರ ರವರಿಗೆ ಸೇರಿದ ಸ್ಥಳವೇ

- 4 - ಸಿ.ಸಿ ನಂಃ 596/2020

ಅಥವಾ ಮಂಜುನಾಥ ರವರಿಗೆ ಸೇರಿದ ಸ್ಥಳವೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ದೇವೆಂದ್ರ ರವರಿಗೆ ಸೇರಿದ ಸ್ಥಳ ಎಂದು ನುಡಿಯುತ್ತಾರೆ.

ದೇವೆಂದ್ರರವರಿಗೆ ಸೇರಿದ ಸ್ಥಳ ಯಾವುದು ಹಾಗೂ ಮಂಜುನಾಥ ರವರಿಗೆ ಸೇರಿದ ಸ್ಥಳ ಯಾವುದು ಎಂದು ನಿಮಗೆ ಗೊತ್ತಿರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಮೇಲೆ ಒಂದು ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು ಅದು ಯಾವ ಕಾರಣಕ್ಕಾಗಿ ಆಗಿರುತ್ತದೆ ಎಂದು ನಿಮಗೆ ತಿಳಿದಿದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಎಲ್ಲಾ ಆರೊಪಿತರ ಪರಿಚಯ ಇರುತ್ತದೆ.

ಸ್ಥಳಕ್ಕೆ ಮೊದಲು ಯಾರು ಬಂದಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅನಂತ, ಮಂಜಣ್ಣ , ಶಿವಾನಂದ , ಅಣ್ಣಪ್ಪರವರುಗಳು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ವಯಕ್ತಿಕವಾಗಿ ನಿಮ್ಮ ಮತ್ತು ಆರೋಪಿತರ ನಡುವೆ ಯಾವುದಾದರೂ ಮಾತುಕತೆ ಆಗಿರುತ್ತದೆಯೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ದೇವೇಂದ್ರ , ಆತನ ತಮ್ಮ ಹಾಗೂ ಆರೋಪಿತರ ನಡುವೆ ಏನು ಮಾತುಕತೆ ಹಾಗೂ ಜಗಳ ಆಗಿರುತ್ತದೆ ಎಂದು ನಿಮಗೆ ಗೊತ್ತಿರುತ್ತದೆಯೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಗಲಾಟೆ ಎಷ್ಟು ಸಮಯದ ವರೆಗೆ ನಡೆದಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಮಾರು 20 ನಿಮಿಷಗಳ ಕಾಲ ನಡೆದಿರುತ್ತದೆ ಎಂದು ನುಡಿಯುತ್ತಾರೆ. ನೀವೇನಾದರೂ ಗಲಾಟೆ ಬಿಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಮ್ಮ ಹೇಳಿಕೆಯಲ್ಲಿ ಆ ದಿನ ನಾನು ಜಗಳ ಬಿಡಿಸಲು ಹೋಗಿರುತ್ತೇನೆ ಹೇಳಿಕೆನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ದೇವೆಂದ್ರ ಮತ್ತು ಮಂಜುನಾಥ ರವರುಗಳ ನಡುವೆ ದಾರಿಗೆ ಸಂಬಂದಿಸಿದಂತೆ ಕೊಂಡ್ಲಿ ಗ್ರಾಮದ ಸುಧೀರ್ ನಾಯ್ಕ ಹಾಗೂ ಭಾಸ್ಕರ ನಾಯ್ಕರವರು ಸಮಸ್ಯೆಗಳು ಬಗೆ ಹರಿಸಲು ಬಂದಿರುತ್ತಾರೆ ಎಂದು ನೀವೇನಾದರೂ ಹೇಳಿಕೆ ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಯು ಸದರಿ ಹೇಳಿಕೆ ನೀಡಿಲ್ಲ ಎಂದು ತಿಳಿಸಿದ್ದರಿಂದ ಸಾಕ್ಷಿಯ ಹೇಳಿಕೆಯನ್ನು ಆರೋಪಿತರ ಪರವಾಗಿ ನಿ.ಡಿ–2 ಎಂದು, ಅದರಲ್ಲಿರುವ ಆಯ್ಕ ಭಾಗವನ್ನು ನಿ.ಡಿ–2(ಎ) ಎಂದು ಗುರುತಿಸಲಾಯಿತು. ಗಲಾಟೆ ಯು ಗದ್ದೆ ಒಳಗಡೆಯೊ ಅಥವಾ ಗದ್ದೆಯ ಮೆಲ್ಬಾಗದಲ್ಲಿ ಆಗಿರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಗದ್ದೆ ಯ ಒಳಗಡೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಗದ್ದೆ ಯ ಒಳಗೆ ನೀರು ಹಾಗೂ ಅರಲು ಇತ್ತೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇತ್ತು ಎಂದು ನುಡಿಯುತ್ತಾರೆ.

ದೇವೆಂದ್ರ ರವರಿಗೆ ಹಾಗೂ ಅವರ ತಮ್ಮ ಗಜಾನನ ರವರಿಗೆ ಯಾರು ಹೊಡೆದಿರುತ್ತಾರೆ ಎಂದು ನಿಮಗೆ ಗೊತ್ತಿರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದೇವೆಂದ್ರ ರವರಿಗೆ ಎಡಕೆನ್ನೆ ಹಾಗೂ ಎಡಕಾಲಿಗೆ ಗಾಯಗಳಾಗಿತ್ತು. ಆರೋಪಿತರಿಗೆ ಯಾವಯಾವ ಕಡೆ ಗಾಯಗಳಾಗಿತ್ತು ಎಂದು ನನಗೆ ಗೊತ್ತಿಲ್ಲ. ಗಲಾಟೆ ಆದ ನಂತರ ಗುದ್ದಲಿಗಳು ಎಲ್ಲಿಗೆ ಹೋಗಿರುತ್ತದೆ ಎನ್ನುವ ಪ್ರಶ್ನೆಗೆ

ಸಾಕ್ಷಿಯು ಸ್ಥಳದಲ್ಲಿಯೆ ಇದ್ದವು ಎಂದು ನುಡಿಯುತ್ತಾರೆ. ಈ ವಿಚಾರವನ್ನು ನೀವು ನಿಮ್ಮ ಹೇಳಿಕೆಯಲ್ಲಿ ಹೇಳಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

ಆ ದಿನ ದೇವೆಂದ್ರರವರು ಯಾವ ಬಟ್ಟೆ ಧರಿಸಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಶರ್ಟ್ ಹಾಗೂ ಚಡ್ಡಿಯನ್ನು ಧರಿಸಿದ್ದರು ಎಂದು ನುಡಿಯುತ್ತಾರೆ. ದೇವೇಂದ್ರರವರಿಗೆ ರಕ್ತ ಬಂದಿತ್ತೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ರಕ್ತವು ಬಟ್ಟೆಗೆ ತಾಗಿತ್ತೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ದೇವೆಂದ್ರರವರ ಬಟ್ಟೆಯನ್ನು ಬದಲಾಯಿಸಿ ನೀವೇನಾದರೂ ಅವರಿಗೆ ಆಸ್ಪತ್ರೆಗೆ ದಾಖಲಿಸಿರುತ್ತಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಗಲಾಟೆಯಲ್ಲಿ ನಿಮಗೆನಾದರೂ ಪೆಟ್ಟಾಗಿರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆ ದಿನ ದೇವೆಂದ್ರ ಹಾಗೂ ಗಜಾನನ ರವರ ಕೈಯಲ್ಲಿ ಏನು ಇತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಗುದ್ದಲಿ ಇತ್ತು ಎಂದು ನುಡಿಯುತ್ತಾರೆ. ಆ ದಿನ ಸ್ಥಳದಲ್ಲಿ ಗದ್ದೆಯ ಸುತ್ತಮುತ್ತ ಇರುವ ವ್ಯಕ್ತಿಗಳು ಯಾರು ಇದ್ದರು ನಿಮಗೆ ಮಾಹಿತಿ ಇದೆಯೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅಕ್ಕಪಕ್ಕದವರು ಏನಾದರೂ ಬಂದು ಗಲಾಟೆಯನ್ನು ಬಿಡಿಸಿರುತ್ತಾರೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಪೊಲೀಸರು ಹಾಗೂ ಅಕ್ಕಪಕ್ಕದವರು ಸೇರಿ ಜಗಳವನ್ನು ಬಿಡಿಸಿರುತ್ತಾರೆ ಎಂದು ಹೇಳಿಕೆ ನೀಡಿರುತ್ತಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನೀವು ಪೋಲೀಸರಿಗೆ ಸುಳ್ಳು ಹೇಳಿಕೆ ನೀಡಿರುತ್ತಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಗಲಾಟೆಯಾದ ದಿನ ಯಾವ ವಾರ ಎಂದು ನನಗೆ ಗೊತ್ತಿರುವುದಿಲ್ಲ. ಅದೇರೀತಿ ಅದು ಬೆಸಿಗೆಕಾಲ , ಚಳಿಗಾಲ ಹಾಗೂ ಮಳೆಗಾಲವೇ ಎಂದು ನನಗೆ ಗೊತ್ತಿರುವುದಿಲ್ಲ.

ಆ ದಿನ ಮಳೆ ಬರುತ್ತಿತ್ತೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಮಳೆ ಬಂದರೆ ರಕ್ಷಣೆಗಾಗಿ ಛತ್ರಿ , ಕಂಬಳಿ ಹಾಗೂ ಕೊಪ್ಪೆಯನ್ನೆನಾದಾರೂ ತೆಗೆದುಕೊಂಡು ಹೋಗಿದ್ದರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ರಾಮಚಂದ್ರನ ಬಳಿ ಕಂಬಳಿ ಇತ್ತು ಎಂದು ನುಡಿಯುತ್ತಾರೆ. ಜುಲೈ ತಿಂಗಳಿನಲ್ಲಿ ಸಾಮಾನ್ಯವಾಗಿ ಮಳೆಗಾಲ ಇರುತ್ತದೆ ಎಂದರೆ ಸರಿ.

ನೀವು ಆ ದಿನ ಗದ್ದೆ ಕೊಚ್ಚಲು ಹೋಗಿರುತ್ತೇನೆ ಎಂದು ನಿಮ್ಮ ಹೇಳಿಕೆಯನ್ನು ಹೊರತುಪಡಿಸಿ ಬೇರೆ ಯಾವುದೇ ಆಧಾರ ಇರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಆ ದಿನ ಹೋಗಿಲ್ಲ ಎಂದು ನುಡಿಯುತ್ತಾರೆ.

ದೇವೇಂದ್ರ, ಸುಧೀರ್ , ಭಾಸ್ಕರ , ಗಜಾನನ ಹಾಗೂ ನೀವು ಮಂಜುನಾಥರವರ ಜಮೀನಿನಲ್ಲಿ ಹೊಸತಾಗಿ ರಸ್ತೆ ಮಾಡುವ ಸಲುವಾಗಿ ಅಲ್ಲಿಗೆ ಹೋಗಿ ಅವರ ಜಾಗದಲ್ಲಿ ನೀವು ಗಲಾಟೆ ಮಾಡಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಆದ ಕಾರಣ ನಿಮ್ಮ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಅವರು ಹೇಗೆ ಮಾಡಿಕೊಂಡಿರುತ್ತಾರೆಯೊ ನನಗೆ



ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದೂರಿನ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ದೇವೇಂದ್ರರವರು ಸುಳ್ಳು ದೂರು ನೀಡಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಆರೋಪಿತರು ದೇವೆಂದ್ರರವರ ಜಮೀನಿನ ಹತ್ತಿರ ಗಲಾಟೆ ಮಾಡಿರುವ ವಿಚಾರ ಹಾಗೂ ದೇವೆಂದ್ರರವರಿಗೆ ಗಾಯಗಳು ಆಗಿರುವ ವಿಚಾರ

ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ನೀಡಿರುವ ಹೇಳಿಕೆ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**